ಈ) ಹೌದು.

ಉ) ಇಲ್ಲ. ಕಾಮಗಾರಿಯ ಗುಣ ಮಟ್ಟ ಸರಿಯಾಗಿಲ್ಲವೆಂಬ ದೂರಿನ ಮೇರೆಗೆ, 1994ರಲ್ಲಿ ಪ್ರಸಿದ್ಧ ಸ್ಟ್ರಕ್ಚರಲ್ ಇಂಜಿನಿಯರ್ ಮತ್ತು ನಾನ್ ಡಿಸ್ಟ್ರಕ್ಟೀವ್ ಟೆಸ್ಟ್ ಎಕ್ವಿಪ್‌ಮೆಂಟ್ ಹೊಂದಿರುವ ಮೆ. ಟಾರ್ ಸ್ಟೀಲ್ ರಿಸರ್ಚ್ ಫೌಂಡೇಶನ್ ಇನ್ ಇಂಡಿಯ (ಟಿ.ಆರ್.ಎಫ್.ಐ) ರವರಿಂದ ವಿವರವಾದ ಪರೀಕ್ಷೆಗಳನ್ನು ಮಾಡಲಾಯಿತು. ಸದರಿ ಫರ್ಮ್‌ರವರು ಬೋರ್ಡ್ ಸ್ಯಾಂಪಲ್ಸ್‌ಗಳನ್ನು ಎಲ್ಲಾ ಸ್ಟ್ರಕ್ಚರಲ್ ಭಾಗಗಳಿಂದ ಪಡೆದು ಕಾಮಗಾರಿಯ ಗುಣಮಟ್ಟ ಮತ್ತು ಭದ್ರತೆಯ ಬಗ್ಗೆ ಪರೀಕ್ಷೆಗಳನ್ನು ನಡೆಸಿದರು. ಈ ಪರೀಕ್ಷೆಗಳ ಫಲಿತಾಂಶಗಳನ್ನು ವಿಶ್ಲೇಷಣೆ ಮಾಡಿದ ನಂತರ ಅವರು ಕಟ್ಟಡವನ್ನು ಉತ್ತಮ ಇಂಜಿನಿಯರಿಂಗ್ ಪದ್ಧತಿಯಲ್ಲಿ ನಿರ್ಮಿಸಿದ್ದು ಕಟ್ಟಡದ ಗುಣ ಮಟ್ಟವು ಉತ್ತಮವಾಗಿದೆ ಎಂದು ಪ್ರಮಾಣಿಸಿದ್ದಾರೆ.

ಬೆಂಗಳೂರು ನಗರಕ್ಕೆ ಕಾವೇರಿ ನಾಲ್ಕನೇ ಹಂತದ ನೀರು ಸರಬರಾಜು ಯೋಜನೆ

29 (61)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರಕ್ಕೆ ನೀರು ಪೂರೈಸಲು ಕಾವೇರಿ 4ನೇ ಹಂತದ ಮೊದಲ ಘಟ್ಟದ ಯೋಜನೆಯನ್ನು ಪ್ರಾರಂಭಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ತಗಲುವ ಅಂದಾಜು ವೆಚ್ಚವೆಷ್ಟು?

ಇ) ಇನ್ನೂ ಪ್ರಾರಂಭಿಸದಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು):

ಅ) ಹೌದು.

ಆ) ಯೋಜನೆಯ ಅಂದಾಜು ವೆಚ್ಚ ರೂ. 1072.00 ಕೋಟಿಗಳು.

ಇ) ಯೋಜನೆಯ ಪ್ರಾರಂಭಿಕ ಕೆಲಸಗಳಾದ ವಿನ್ಯಾಸ, ಟೆಂಡರ್ ಸಿದ್ಧಪಡಿಸುವ ಕಾರ್ಯಗಳು 15.1.97 ರಿಂದ ಪ್ರಾರಂಭವಾಗಿದೆ.

ಚಾಮರಾಜ ವಿಧಾನ ಸಭಾ ಕ್ಷೇತ್ರದಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವುದು